ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**272/2020.**</u>

ದಿನಾಂಕಃ**17.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಹರೀಶ್ | ಚಾಸಾ-4,<br>ಪ್ರಾಸಾ-4 |
| ತಂದೆಯ ಹೆಸರು | ರಾಜಣ್ಣ ಜೆ | |
| ವಯಸ್ಸು | 49 | |
| ಉದ್ಯೋಗ | ವಾಚ್ ಅಂಗಡಿ | |
| ವಾಸ | ಕಡೂರು ಟೌನ್ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 1 ನನ್ನ ತಾಯಿ. ಚಾಸಾ 5, 6 ರವರು ನನಗೆ ಗೊತ್ತು. ದಿಃ07.01.2019 ರಂದು ನಾನು ನನ್ನ ಅಂಗಡಿಯ ಬೀಗ ಹಾಕಿಕೊಂಡು ಬರುತ್ತಿದ್ದಾಗ ರಾತ್ರಿ ಸು.8 ಗಂಟೆಯಲ್ಲಿ ನನಗೆ ಯಾವುದೋ ಒಂದು ಫೋನ್ ಕರೆ ಬಂತು, ಅವರು ನನ್ನ ತಾಯಿಯ ಕೊರಳ ಚಿನ್ನದ ಮಾಂಗಲ್ಯದ ಚೈನ್ ಅನ್ನು ಯಾರೋ ಇಬ್ಬರು ಬೈಕಿನಲ್ಲಿ ಬಂದು ಕನ್ನಿಕಾ ಪರಮೇಶ್ವರ ದೇವಸ್ಥಾನದ ಮುಂದಿನ ಸ್ಥಳದಲ್ಲಿ ಹಿಂಬದಿ ಕುಳಿತಿದ್ದ ವ್ಯಕ್ತಿ ಕುತ್ತಿಗೆಯಿಂದ ಕಿತ್ತುಕೊಂಡ ಹೋಗಿರುತ್ತಾನೆ ಎಂದು ತಿಳಿಸಿದರು. ತಕ್ಷಣ ನಾನು ಸದರಿ ದೇವಸ್ಥಾನದ ಬಳಿಗೆ ಹೋಗಿರುತ್ತೇನೆ. ಚಾಸಾ 1 ರವರು ತುಂಬಾ ಸುಸ್ತಾಗಿ ಅಳುತ್ತಾ ಕುಳಿತಿದ್ದರು. ನಾನು ನೋಡಿದಾಗ ಅವರ ಕಣ್ಣಿಗೂ ಸಹ ಪೆಟ್ಟು ಬಿದ್ದಿತ್ತು. ಆಗ ನನ್ನ ತಾಯಿಯು ಬೈಕಿನಲ್ಲಿ ಇಬ್ಬರು ವ್ಯಕ್ತಿಗಳು ಬಂದು ಹಿಂಬದಿ ಕುಳಿತಿದ್ದ ವ್ಯಕ್ತಿ ನನ್ನ ಕುತ್ತಿಗೆಗೆ ಕೈ ಹಾಕಿ ಮಾಂಗಲ್ಯ ಸರ ಎಳೆದುಕೊಂಡು ಹೋದರು ಎಂದು ತಿಳಿಸಿದರು. ಸದರಿ ಚೈನ್ 95 ಗ್ರಾಂ ಇತ್ತು. ಈಗ ನನ್ನ ತಾಯಿಯ ಪೆಟ್ಟು ಬಿದ್ದಿದ್ದ ಕಣ್ಣು ಕಾಣುತ್ತಿಲ್ಲ. ತಕ್ಷಣ ಪಕ್ಕದಲ್ಲಿಯೇ ಇದ್ದ ಲಕ್ಷ್ಮೀ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿರುತ್ತೇನೆ.

ನಂತರ ಪೊಲೀಸರು ನಮಗೆ ಸದರಿ ಸರವನ್ನು ಆರೋಪಿಗಳು ಕರಗಿಸಿದ್ದರು ಎಂದು ಹೇಳಿ ನಮಗೆ ಚಿನ್ನದ ಗಟ್ಟಿ ನೀಡಿರುತ್ತಾರೆ. ಸದರಿ ಚಿನ್ನದ ಗಟ್ಟಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ.

ಸಾಕ್ಷಿಯು ಪೊಟೋದಲ್ಲಿ ನೋಡಿ ಸದರಿ ಚಿನ್ನದ ಗಟ್ಟಿಯನ್ನು ಗುರುತಿಸಿದ್ದರಿಂದ

ಸದರಿ ಪೋಟೋವನ್ನು ನಿಪಿ 5 ಎಂದು ಗುರುತಿಸಲಾಯಿತು. ಈ ಘಟನಾ ವಿಚಾರದ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀಸವಾಲುಃ **1** ನೇ ಆರೋಪಿ ಪರ ಶ್ರೀ. ಎನ್ ಎಸ್ ವಕೀಲರಿಂದಃ

ಮೈಸೂರು ಟೈಮ್ಸ್ ಅಂಗಡಿ ನಮ್ಮದು ಎಂದರೆ ಸರಿ. ಚಾಸಾ 2, 3 ರವರು ನನಗೆ ತುಂಬಾ ಪರಿಚಯ ಎಂದರೆ ಸರಿಯಲ್ಲ, ಆದರೆ ಅವರು ನಮ್ಮ ಮನೆಯ ಬೀದಿಯಲ್ಲಿ ಇದ್ದಾರೆ. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ ಸು.10-15 ಜನ ಸೇರಿದ್ದರು. ಲಕ್ಷ್ಮೀ ಆಸ್ಪತ್ರೆಯ ವೈದ್ಯರಿಗೆ ಚೈನ್ ಕಳ್ಳತನದಿಂದ ಪೆಟ್ಟು ಆಗಿದೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಅಲ್ಲಿ ವೈದ್ಯರು ಇರಲಿಲ್ಲ ನರ್ಸ್ ಗಳು ಇದ್ದರು, ಅವರಿಗೆ ತಿಳಿಸಿರುತ್ತೇನೆ. ಸದರಿ ನರ್ಸ್ ರವರು ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆಯೇ ಎಂದರೆ ಸಾಕ್ಷಿಯು ನಾನು ಅಲ್ಲಿ ಒಳರೋಗಿಯಾಗಿ ದಾಖಲು ಮಾಡಿರುವುದಿಲ್ಲ, ಆಸ್ಪತ್ರೆಯ ಪಕ್ಕದಲ್ಲಿಯೇ ನನ್ನ ಮನೆ ಇರುವುದರಿಂದ ನಾನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ಇಬ್ಬರು ಪೊಲೀಸರು ರಾತ್ರಿ 8.20 ಕ್ಕೆ ಸ್ಥಳಕ್ಕೆ ಬಂದಿರುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಗೆ ವಯಸ್ಸಾಗಿದ್ದ ಕಾರಣ ತುಂಬಾ ಸಮಯವಾಗುತ್ತದೆ ನಾಳೆ ಬೆಳಗ್ಗೆ ಬಂದು ದೂರು ನೀಡಿ ಎಂದು ಪೊಲೀಸರು ಹೇಳಿದ ಕಾರಣ ನಾವು ಮಾರನೇ ದಿನ ದೂರು ನೀಡಿರುತ್ತೇನೆ.

ಘಟನೆ ನಡೆದ ದಿನವೇ ಪೊಲೀಸರು ಚಾಸಾ 1 ರವರನ್ನು ವಿಚಾರಿಸಿದರು, ಆದರೆ ಚಾಸಾ 1 ರವರು ಏನು ಹೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನನಗೆ ಸಾರ್ವಜನಿಕರ ಪೈಕಿ ಯಾರೋ ಒಬ್ಬ ವ್ಯಕ್ತಿಗೆ ನನ್ನ ತಾಯಿ ಹೇಳಿ ಫೋನ್ ಮಾಡಿಸಿದ್ದರು.

ಪೊಲೀಸರು ನನ್ನ ಹೇಳಿಕೆಯನ್ನು ನಾವು ದೂರು ದಾಖಲು ಮಾಡುವ ಮುಂಚಿತವಾಗಿ ಪಡೆದಿರುತ್ತಾರೆ. ನಾನು ಅದೇ ದಿನ ರಾತ್ರಿ ಸಹ ಪೊಲೀಸರಿಗೆ ಹೇಳಿರುತ್ತೇನೆ ಹಾಗೂ ಮಾರನೇ ದಿನ ಬೆಳಗ್ಗೆ ಸುಮಾರು 11 ರಿಂದ 11.30 ಗಂಟೆಯಲ್ಲಿಯೂ ಹೇಳಿರುತ್ತೇನೆ. ನಾನು ಠಾಣೆಯಲ್ಲಿ ಸಹಿ ಮಾಡಿರಬಹುದು, ಆದರೆ ಅದು ಯಾವ ದಾಖಲೆ

ಎಂದು ನೆನಪಿಲ್ಲ. ನಾನು ಘಟನಾ ಸ್ಥಳದಲ್ಲಿ ಯಾವುದೇ ಸಹಿ ಮಾಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಕಳ್ಳತನವಾದ ನಂತರ ಮಾಂಗ್ಯಲ್ಯ ಸರವನ್ನು ನಾನು ನೋಡಿರುವುದಿಲ್ಲ, ಅದನ್ನು ಗಟ್ಟಿಯಾಗಿ ಮಾಡಿದ್ದರು. ಮಾಂಗಲ್ಯ ಸರವನ್ನು ಗಟ್ಟಿಯಾಗಿ ಮಾಡಿದ್ದಾರೆ ಎಂದು ಪೊಲೀಸರು ನನಗೆ ತಿಳಿಸಿದರು.

<u>ಪಾಟೀಸವಾಲುಃ **2** ನೇ ಆರೋಪಿ ಪರ ಶ್ರೀ. ಕೆ ಎಸ್ ಆರ್ ವಕೀಲರಿಂದಃ</u>

ಶ್ರೀ. ಕೆ ಎಸ್ ಆರ್ ವಕೀಲರು ತಮ್ಮ ಪರವಾಗಿನ ಪಾಟೀ ಸವಾಲನ್ನಾಗಿ ಈ ಮೇಲೆ ಶ್ರೀ ಎನ್ ಎಸ್ ವಕೀಲರು ಮಂಡಿಸಿರು ಪಾಟೀ ಸವಾಲನ್ನು ಅನುಮೋದಿಸುವಂತೆ ಕೋರಿರುತ್ತಾರೆ. ವಕೀಲರ ಮನವಿಯನ್ನು ಪುರಸ್ಕರಿಸಲಾಗಿರುತ್ತದೆ.

<u>ಮರು ವಿಚಾರಣೆ ಃ ಇಲ್ಲ</u>
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.